ಇತಿಹಾಸದ ಪ್ರಕಾರ ಬಕ್ತಾಶನ ಪ್ರೇಮ ನಿನ್ನನ್ನು ಸುಂಟರಗಾಳಿಯಂತೆ ಆವರಿಸಿಕೊಂಡಿತಂತೆ. ಅವನ ಪ್ರೇಮದಲ್ಲಿ ನೀನು ಕೊರಗಿ, ಮಾಗಿ ಕವಿಯಾದೆಯಂತೆ. ನಿನ್ನ ಬದುಕು ರಹಸ್ಯಮಯವಾಗಿತ್ತು ಮತ್ತು ಅವೇ ರಹಸ್ಯಗಳು ನಿನ್ನನ್ನು ಇಂದಿಗೂ ಕೊಲ್ಲುತ್ತಿವೆ. ನನಗೆ ಗೊತ್ತಿರುವಂತೆ, ನಿನ್ನೊಳಗಿನ ಕಾವ್ಯ ಸೇಡು, ಅಸಹನೆಗಳಿಂದ ತುಂಬಿ ಕಟ್ಟೆಯೊಡೆದು ಭೋರ್ಗರೆದು ಹರಿದು ಬಂತು. ನೀನು ತಿನ್ನಲಿಲ್ಲ, ಮಲಗಲಿಲ್ಲ, ಕುಡಿಯಲಿಲ್ಲ ಅಥವಾ ನಿನಗೆ ಯಾರೂ ಏನನ್ನೂ ಕೊಡಲಿಲ್ಲ. ಆಗ ನಿನ್ನ ಅಜ್ಜಿಯೊಬ್ಬಳು ನಿನ್ನನ್ನು ಸಂತೈಸಿ ಸಮಾಧಾನಿಸಿ ನಿನ್ನ ಕಥೆಯೇನೆಂದು ಕೇಳಿದಳು. ನಿನ್ನ ಪ್ರೇಮದ ಗುಟ್ಟು ಹೊರಗೆ ಬಿದ್ದಾಗ ನಿನ್ನ ಸಾವಿನ ಗಳಿಗೆಯೂ ಹತ್ತಿರವಾಯಿತು. ರಾಬಿಯಾ, ನಮ್ಮೆಲ್ಲರ ಬದುಕೂ ಹೀಗೇ ಇದೆ. ನಮ್ಮ ಗುಟ್ಟುಗಳನ್ನು ಹೇಳಿದರೂ ಕೊಲೆಯಾಗುತ್ತೇವೆ. ಹೇಳದೇ ಇದ್ದರೂ ಕೊಲೆಯಾಗುತ್ತೇವೆ.

ನೀನು ಅಜ್ಜಿಯ ಮಾತು ಕೇಳಿ ಬಕ್ತಾಶನಿಗೆ ಪ್ರೇಮಪತ್ರವನ್ನು ಬರೆದೆ. ದಂತಕಥೆಗಳ ಪ್ರಕಾರ, ನೀನು ಬಹಳ ಅಪರೂಪದ ಸುಂದರಿ – ಮೋಹಕ ಕಣ್ಣುಗಳು, ಮುತ್ತಿನಂಥ ಹಲ್ಲುಗಳು, ಹವಳದಂಥ ತುಟಿಗಳು... ಸಾಕು ಸಾಕು... ನನಗೆ ನಿನ್ನ ಸೌಂದರ್ಯದ ಬಗ್ಗೆ ಕುತೂಹಲವಿಲ್ಲ. ರಾಬಿಯಾ ನೀನು ಸುಂದರಿಯಾಗಿರದಿದ್ದರೇನಂತೆ? ಬಹುಶಃ ನಮ್ಮ ಕವಿಗಳು ನಿನ್ನನ್ನು ಅತಿಲೋಕ ಸುಂದರಿಯಾಗಿಸಿಬಿಟ್ಟರು. ಸಾಧಾರಣ ರೂಪಿನ ರಾಜಕುಮಾರಿಯೊಬ್ಬಳು ಪ್ರೀತಿಸಿದರೆ– ಅವಳು ಯಾರನ್ನು ಪ್ರೀತಿಸಿದರೇನಂತೆ– ಯಾರಿಗೆ ಕೇಳಲು ಆಸಕ್ತಿಯಿರುತ್ತದೆ? ಅದಕ್ಕೇ ನನಗೆ ನಿನ್ನ ರೂಪ ಲಾವಣ್ಯಗಳಿಗಿಂತ ನಿನ್ನ ಬದುಕಿನ ದುರಂತದ ಬಗ್ಗೆ ಹೆಚ್ಚು ತಿಳಿಯುವ ಆಸಕ್ತಿಯಿದೆ.

ಬಕ್ತಾಶ್ ಒಂದು ನೆಪವಷ್ಟೇ. ಒಂದು ದೈವಿಕ ಸ್ಫೂರ್ತಿಯಿಂದ ರಾಬಿಯಾ ಕಾವ್ಯ ಬರೆಯಲು ಪ್ರೇರೇಪಿತಳಾದಳು ಎಂಬ ಕಥೆಗಳಿವೆ. ರಾಬಿಯಾ, ವಿಚಿತ್ರವೇನೆಂದರೆ ಲೇಖನಿ ಹಿಡಿದಿರುವ ಕವಿಗಳು ಅವತ್ತಿಗೂ ಇವತ್ತಿಗೂ ನಿನ್ನ ಪ್ರೇಮದ ಕಥೆಯನ್ನು ತಿರುಚಿ ನಿನ್ನನ್ನು ಸಂತಳಾಗಿಸಿ ಸೂಫಿಯಾಗಿಸಿಬಿಟ್ಟರು. ಅವರ ಪ್ರಕಾರ, ನಿನ್ನ ನಿಜವಾದ ಪ್ರೀತಿ ದೇವರಿಗೆ ಮೀಸಲಾಗಿತ್ತೇ ಹೊರತು ರಕ್ತಮಾಂಸಗಳಿರುವ ಹೆಣ್ಣುಜೀವವೊಂದು ಗಂಡಿನ ಮೋಹಕ್ಕೆ ಒಳಗಾಗುವುದು ಬೇಕಿರಲಿಲ್ಲ. ಒಮ್ಮೆ ಬಕ್ತಾಶನು ನಿನ್ನನ್ನು ಗುಂಪಿನಲ್ಲಿ ಹುಡುಕಿಕೊಂಡು ಬಂದಾಗ ನೀನು ಅವನಿಗೆ ನಿನ್ನ ಪ್ರೇಮ ದೇಹವನ್ನು ಮೀರಿದ ಅನುಭೂತಿಯೇ ಹೊರತು ಕಾಮವಲ್ಲ ಎಂದು ಬೈದು ಕಳಿಸಿದೆಯಂತೆ ಎಂದು ಕಥೆಗಳಲ್ಲಿ ಪ್ರಚಲಿತವಾಗಿದೆ. ರಾಬಿಯಾ, ಯಾವತ್ತಿಗೂ ನಿನ್ನ ಹೆಸರನ್ನು ಅಕಳಂಕಿತವಾಗಿ ಉಳಿಸಬೇಕೆಂಬ ಹಂಬಲ ನಿನ್ನ ಸಮಾಧಿಯ ಆಚೆ ಬಹಳ ದೊಡ್ಡದಾಗಿ ಶುರುವಾಗಿದೆ. ನಿನ್ನ ಪ್ರತಿಭೆ, ಅಫ್ಘಾನಿಸ್ತಾನದ ಮೊದಲ ಕವಯಿತ್ರಿ ಎಂಬ ಕೀರ್ತಿ ನಿನಗೆ ಬಲುದೊಡ್ಡ ಐತಿಹಾಸಿಕ ಮಹತ್ವವನ್ನು ಗಳಿಸಿಕೊಟ್ಟಿದೆ. ಇಂಥವಳನ್ನು, ಸಣ್ಣ ವಯಸ್ಸಿಗೇ ಗುಲಾಮನೊಬ್ಬನ ಮೋಹಕ್ಕೆ ಬಿದ್ದ ಹುಡುಗಿಯೊಬ್ಬಳನ್ನು, ಅವಳ ತಮ್ಮ ಬೇರೆ ದಾರಿಯಿಲ್ಲದೆ ಮನೆತನದ ಘನತೆಯುಳಿಸುವುದಕ್ಕಾಗಿ ತನ್ನ ಕೈಯಾರ ಕತ್ತರಿಸಿಬಿಟ್ಟ ಎಂದು ಹೇಗೆ ಚಿತ್ರಿಸಲು ಸಾಧ್ಯ? ಆದ್ದರಿಂದಲೇ ನಿನ್ನನ್ನು ಪವಿತ್ರಳಾಗಿಸಿ ಸಂತಳನ್ನಾಗಿಸುವ ಕಥೆಗಳು ಶುರುವಾದವು. ನನಗೆ ಇದನ್ನು ಹೇಳಲು ನೋವಾಗುತ್ತಿದೆ, ರಾಬಿಯಾ ನಾವು ಸತ್ತವರನ್ನೂ ಸಮಾಧಾನದಿಂದ ಮಲಗಿರಲು ಬಿಡುವುದನ್ನು ಕಲಿತಿಲ್ಲ, ಸುಮ್ಮನಿರಲಾರದೇ ನಾವು ಸತ್ತವರ ಬಗೆಗೂ ಗೌರವ ತೋರದೆ ಸುಳ್ಳುಗಳನ್ನು ಹೇಳಲು ಶುರುಮಾಡಿದ್ದೇವೆ.

ಒಂದು ಕಥೆಯ ಪ್ರಕಾರ ನೀನು ರುಡಾಕಿ ಎಂಬ ಆಸ್ಥಾನ ಕವಿಯನ್ನು ಭೇಟಿಯಾದಾಗ ಇಬ್ಬರೂ ಕಾವ್ಯ, ಲಯ, ರೂಪಕಗಳು ಎಲ್ಲದರ ಬಗ್ಗೆ ಚರ್ಚೆ ಮಾಡಿದಿರಿ. ನಿನ್ನನ್ನು ನೋಡಿ ರುಡಾಕಿ ಎಷ್ಟು ಪ್ರಭಾವಿತನಾದನೆಂದರೆ, ಅವನು ನಿನ್ನ ಕವಿತೆಗಳನ್ನೆಲ್ಲ ಬಾಯಿಪಾಠ ಮಾಡಿಬಿಟ್ಟ ಅಥವಾ ಆತ ಕುರುಡನಾಗಿದ್ದರಿಂದ ಕಿವಿಯಿಂದ ಕೇಳಿದ್ದನ್ನೆಲ್ಲ ಚಾಚೂತಪ್ಪದೆ ನೆನಪಿಟ್ಟುಕೊಂಡ. ನೀನೂ ಸಹ ಉದ್ವೇಗದಲ್ಲಿ ಹೇಳುವುದಕ್ಕಿಂತ ಹೆಚ್ಚೇ ಹೇಳಿಬಿಟ್ಟೆ ಅನಿಸುತ್ತೆ ರಾಬಿಯಾ? ನಿನ್ನ ಮುಖದ ಮೇಲೆ ಪ್ರೇಮ ಭೋರ್ಗರೆದು ಹರಿಯುವುದನ್ನು ಅವನು ನೋಡಿರಲಾರ. ಆದರೆ ಅವನು ಬಹಳ ಬುದ್ಧಿವಂತ, ಚಾಲಾಕಿ ಆಸಾಮಿ. ಎಂಟು ವರ್ಷದ ಹೊತ್ತಿಗೇ ಇಡೀ ಕುರಾನನ್ನು ಬಾಯಿಪಾಠ ಮಾಡಿಬಿಟ್ಟಿದ್ದ. ಅಂಥವನನ್ನು